ಪುನರ್ಜನ್ಮ ಎನ್ನುವ ಹೇಳಿಕೆ ಬರೀ ಹೇಳಿಕೆಯಾಗದೆ ವಾಸ್ತವವಾಗಿದ್ದ ಕಾಲ. ಆಸ್ಪತ್ರೆ ಗೀಸ್ಪತ್ರೆಗೆ ಹೋಗುವ ಪಂಚಾಯಿತಿಕೆ ಇರಲಿಲ್ಲ. ಮನೆಯಲ್ಲೇ ಹೆರಿಗೆ. ಪಳಗಿದ ಹೆಂಗಸರು ಊರಲ್ಲಿಲ್ಲದಿದ್ದರೆ ಮನೆಯ ಹಿರಿಯಳದೇ ಮೇಲ್ವಿಚಾರಣೆ. ತೊಟ್ಟಿಂದ ಹಣ್ಣು ಉದುರುವಷ್ಟೇ ಸಲೀಸಾಗಿ ಹೆರಿಗೆಯಾದ ಉದಾಹರಣೆಗಳಿದ್ದಂತೆ, ಹೆರಿಗೆಯ ಹೊತ್ತಿಗೆ ನಾನಾ ಕಾರಣಗಳಿಂದ ಜೀವಬಿಡುತ್ತಿದ್ದ ಹೆಣ್ಣುಗಳ ಉದಾಹರಣೆಗಳೂ ಬೇಕಾದಷ್ಟಿರುತ್ತಿದ್ದುವು. ಮೊದಲನೆಯವಳು ಹೋದರೆ ಮತ್ತೊಂದು, ಅವಳೂ ಹೋದರೆ ಮಗದೊಂದು ಎಂದು ಗಂಡಸರು ಸಲೀಸಾಗಿ ಮದುವೆಯಾಗುತ್ತಿದ್ದರು. ಅಂಥವರಿಗೆ ಹೆಣ್ಣಿನ ಅಭಾವ ಆಗಿದ್ದು ಸೀತಾಲಕ್ಷ್ಮಿಗೆ ಗೊತ್ತಿಲ್ಲ. ಕೇಳಿಯೂ ಇಲ್ಲ. ದೂರ ಹೋಗುವುದು ಯಾಕೆ, ಸೀತಾಲಕ್ಷ್ಮಿಯ ಅಮ್ಮ ಅಪ್ಪನ ಎರಡನೇ ಹೆಂಡತಿ. ಮೊದಲನೆಯವಳು ತೀರಿಕೊಂಡಿದ್ದು ಮೂರನೇ ಹೆರಿಗೆಯಲ್ಲಿ.

ಜನನ ಕಾಲದಲ್ಲಿ ಮಗು ಕಾಲು ಮುಂದಾಗಿ ಕಾಣಿಸಿಕೊಂಡಿತ್ತಂತೆ. ಒಂದು ಕಾಲು ಮಡಿಸಿ ಕೊಂಡಿತ್ತೋ, ಎಂತಾ ಕತೆಯೋ, ನೋವು ತಿಂದು ತಿಂದು ಅಮ್ಮನೂ ಉಳಿಯಲಿಲ್ಲ, ಅಮ್ಮನ ಗರ್ಭಕೋಶದಿಂದ ಅರ್ಧಂಬರ್ಧ ಹೊರಬಂದ ಮಗುವೂ ಉಳಿಯಲಿಲ್ಲ. ಯಾವಾಗಲೋ ತನ್ನಮ್ಮನ ಬಾಯಿಂದ ಕೇಳಿದ್ದ ಕತೆ. ಅಂಥಾದ್ದನ್ನೆಲ್ಲಾ ಉದ್ದೇಶಪೂರ್ವಕವಾಗಿ ನೆನೆಸಿಕೊಳ್ಳುವುದಿಲ್ಲ ಸೀತಾಲಕ್ಷ್ಮಿ. ಆದರೂ ಹೆರುವ ದಿನಗಳು ಹತ್ತಿರ ಹತ್ತಿರ ಬರುತ್ತಿದ್ದಂತೆ ಇಂತಾ ಅಬದ್ಧಗಳೇ ನೆನಪಾಗುತ್ತವೆ. ಮತ್ತ್ಯಾರಿಗೋ ಭೂತಾಕಾರದ ಮಗು ಹುಟ್ಟಿತ್ತಂತೆ. ಕೋರೆ ಹಲ್ಲು, ತಲೆಯ ಮೇಲೆ ಕೋಡು, ಥೇಟ್ ರಾಕ್ಷಸ ಶಿಶುವೇ. ಹೆರಿಗೆಯ ಹೊತ್ತಿಗೆ ಕೋಣೆಯಲ್ಲಿ ಒಂದು ದೊಡ್ಡ ದಬರಿ ಇಟ್ಟುಕೊಂಡಿರುತ್ತಾರಂತೆ. ಇಂಥಾ ಮಗು ಹುಟ್ಟಿದರೆ ತಕ್ಷಣ ಅದರ ಮೇಲೆ ದಬರಿ ಕವುಚಿ ಹಾಕಿ ಗಾಳಿಯಾಡದಂತೆ ಮಾಡಬೇಕಂತೆ. ಇಲ್ಲದಿದ್ದರೆ ಗಾಳಿ ಸೇವಿಸಿದ ಹಾಗೆ ಅದು ಬೆಳೆಯುತ್ತಾ, ಬೆಳೆಯುತ್ತಾ, ಮನೆ ಮಾಡಿನಷ್ಟೆತ್ತರ ಬೆಳೆದು, ಮೊದಲು ತಾಯಿಯ ಗೋಣು ಮುರಿದು ರಕ್ತ ಕುಡಿದು, ಆಮೇಲೆ ಮನೆಮಂದಿಯನ್ನು ಸ್ವಾಹಾ ಮಾಡಿ, ಕೇಳಿದ ಕತೆಗಳೆಲ್ಲಾ ನೆನಪಾಗಿ ಎದೆ ನಡುಗುತ್ತಿತ್ತು. ಸೀತಾಲಕ್ಷ್ಮಿ ದೇವರ ಸ್ಮರಣೆ ಮಾಡುತ್ತಾ ಕೆಟ್ಟ ಯೋಚನೆಗಳನ್ನು ದೂರ ತಳ್ಳುವ ಪ್ರಯತ್ನ ಮಾಡುತ್ತಿದ್ದಳು. ‘ಇನ್ನೂ ಆ ಕಾಲ ದೂರ ಇದೆ’ ಎಂದು ಸಮಾಧಾನ ಕಂಡುಕೊಳ್ಳುತ್ತಿದ್ದ ಅವಧಿ ಮುಗಿಯುತ್ತಾ ಬಂದಿದೆ. ಹೆರಿಗೆಯ ದಿನ ಹತ್ತಿರ ಹತ್ತಿರ ಬಂದೇಬಿಟ್ಟಿದೆ. ತೌರುಮನೆಯಲ್ಲಿರುವಾಗ ಅರಳು ಹುರಿದಂತೆ ಸದಾ ಮಾತಾಡುತ್ತಿರುತ್ತಿದ್ದ ಸೀತಾಲಕ್ಷ್ಮಿ ಮೌನಿಯಾಗಿರುವುದನ್ನು ಕಂಡು ಅಣ್ಣ ಕೇಳಿದ್ದ,

‘ಗಂಡನ್ನ ಬಿಟ್ಟು ಬಂದಿದ್ದಕ್ಕೆ ಬೇಜಾರಾಗ್ತಿದೆಯೇನೇ?’

‘ಏ, ಹೋಗೋ...’

‘ಮತ್ತ್ಯಾಕೆ ಬಾಯಿಗೆ ಕಡುಬು ತುಂಬ್ಕಂಡಿದ್ದಿ?’

‘ನಾನೇ ಮಾತಾಡ್ಬೇಕೂಂತಿದೆಯಾ? ಮಾತಾಡು ನೀನೇ...’

‘ಅಲ್ಲ ಕಣೇ, ನಿನ್ನ ಅತ್ತಿಗೆ ಸುದ್ದಿ ಏನಾರೂ ಗೊತ್ತಾಯ್ತಾ? ಕೈಯಾರೆ ಜೀವ ಕಳ್ಕಂಡಿದ್ದೇ ಹೌದು ಅಂತೀಯಾ?’

‘ಹುಶ್, ಬಸ್ಸಲ್ಲಿ ಆ ಮಾತು ಎಂತಕ್ಕೋ ಮಾರಾಯಾ? ನಿಂಗೆ ಎಷ್ಟು ಗೊತ್ತುಂಟೋ ನಂಗೂ ಅಷ್ಟೇ ಗೊತ್ತಿರೋದು...’

‘ಸುಳ್ಳು ಹೇಳ್ಬೇಡ. ಏನಾರೂ ಸುಳು ಸಿಗ್ದೇ ಇರುತ್ತಾ?’

ಗಂಡನ ಆಣೆ, ಭಾಷೆ ಕಟ್ಟಿ ಹಾಕಿರದಿದ್ದರೆ ಪ್ರೀತಿಯ ಅಣ್ಣನೊಡನೆ ಪಿಸುದನಿಯಲ್ಲಿ ಎಲ್ಲವನ್ನೂ ಹೇಳಿಕೊಂಡುಬಿಡುತ್ತಿದ್ದಳೇನೋ ಸೀತಾಲಕ್ಷ್ಮಿ.

‘ಸುಳು ಸಿಕ್ಕಿದ್ರೆ ನಿನ್ಹತ್ರ ಹೇಳ್ದೆ ಇರ್ತಿದ್ನಾ? ಊರಿಗೆಲ್ಲಾ ಗೊತ್ತಾಗ್ದೆ ಇರ್ತಿತ್ತಾ? ಊರಿಗೆ ಗೊತ್ತಾದ ವರ್ತಮಾನ ನಿಮಗೂ ತಲುಪ್ತಿತ್ತಪ್ಪಾ...’

‘ಪಾಪ, ಒಳ್ಳೇ ಜನ ಅಲ್ಲನೇ?’

‘ಹೂಂ ಕಣೋ. ಒಂದು ಹೊಟ್ಟೆಕಿಚ್ಚಿನ ಮಾತಿಲ್ಲ. ಹಂಗಲ್ಲ ಹಿಂಗೆ ಅಂದೋರಲ್ಲ. ಉಟ್ಟ ಬಟ್ಟೇಲಿ ಎದ್ದು ನಡೆದಿದಾರೆ...’

‘ಹಂಗಿದ್ಮೇಲೆ ಜೀವ ತೆಕ್ಕೊಳ್ಳೋಕೆ ನಿಶ್ಚೈಸಿದ್ದೇ ಹೌದು...’

‘ಏನೋಪ್ಪ. ಪರಮಾತ್ಮಂಗೇ ಗೊತ್ತು.’

ಅಣ್ಣನ ಕುತೂಹಲ ತಣಿಯಿತು. ಅಲ್ಲಿಗೆ ಆ ಮಾತು ಮುಗಿಯಿತು. ಬೇರೆ ಪುರಾಣ ಶುರುವಾಯ್ತು. ಅಣ್ಣ, ತಂಗಿ ಮನಸ್ಸು ಬಿಚ್ಚಿ ಮಾತಾಡುತ್ತಾ ಪ್ರಯಾಣ ಬೆಳೆಸಿದರು.

***

ತೌರುಮನೆಯಲ್ಲಿ ಬಾಣಂತಿ ಚಾಕರಿಗೆ ಕರೆಸಿಕೊಂಡಿದ್ದು ದೇವಕಿಯನ್ನು. ಹೆರಿಗೆ ಮಾಡಿಸುವುದರಲ್ಲೂ ಅವಳಿಗೆ ಒಂದಿಷ್ಟು ಅನುಭವ ಇದೆ ಎಂದು ಹೆಣ್ಣುಮಕ್ಕಳ ನಂಬಿಕೆ. ಆ ಸಮಯಕ್ಕೂ ಒದಗುತ್ತಾಳೆ. ಮುಂದೆ ಬಾಣಂತನದ ಹೊತ್ತಿಗೂ ಕೈನೆರವಿಗೆ ಇರುತ್ತಾಳೆ ಎಂದು ಅವಳಿಗೆ ಕರೆ ಹೋಗಿತ್ತು. ಅಣ್ಣ ಸ್ವತಃ ಹೋಗಿ ಯಾರ ಮನೆಯಲ್ಲೋ ತಳ ಊರಿದ್ದ ಅವಳನ್ನು ಕರೆದುಕೊಂಡು ಬಂದಿದ್ದನಂತೆ. ದೇವಕಿ ಎಲ್ಲೇ ಇರಲಿ, ಇವರ ಮನೆಯಿಂದ ಕರೆ ಬಂದರೆ ಒಲ್ಲೆ ಎನ್ನುವುದಿಲ್ಲ. ಅದರ ಹಿಂದೆ ಒಂದು ಕಾರಣ ಇದೆ. ಕಮಲತ್ತಿಗೆಯಂತದ್ದೇ ಒಂದು ಗೋಳಿನ ಕತೆ ದೇವಕಿಯದು. ಎಲ್ಲರ ಹಾಗೆ ಹದಿನೈದು, ಹದಿನಾರಕ್ಕೆ ಮದುವೆ ಆಯ್ತು. ಆಮೇಲೇ ಗೊತ್ತಾಗಿದ್ದು ಆ ಗಂಡ ಎಲ್ಲರ ಹಾಗಲ್ಲ ಅಂತ. ಭರ್ತಿ ಇದ್ದುಳ್ಳವರ ಮನೆ ಎಂದು ಅವಳ ಅಪ್ಪ ಗೊತ್ತಿದ್ದೇ ಮದುವೆ ಮಾಡಿದನೋ, ಗೊತ್ತಿಲ್ಲದೆ ಮದುವೆ ಮಾಡಿದನೋ, ದೇವಕಿ ಆ ಮನೆಯ ಸೊಸೆಯಾಗಿ ಹೋದ ಮೇಲೆ ಗಂಡನ ನಿಜಸ್ವರೂಪ ಅವಳ ಅರಿವಿಗೆ ಬಂತು. ಗಂಡ ಹುಟ್ಟಾ ಬುದ್ಧಿಮಾಂದ್ಯ. ತಿಳಿವಳಿಕೆ ಅನ್ನುವುದು ಸೊನ್ನೆ. ಯಾರು ಹೇಗೆ ಹೇಳಿದರೆ ಹಾಗೆ. ಮೇಲ್ನೋಟಕ್ಕೆ ಸುಖವಾಗಿ ಉಂಡುಕೊಂಡು, ತಿಂದುಕೊಂಡು, ಸೈಂಧವನ ಹಾಗೆ ಬೆಳೆದಿದ್ದ. ‘ಅಳಿಯನ ಕುರುಡು ಬೆಳಗಾದ ಮೇಲೆ’ ಎನ್ನುವಂತೆ ದೇವಕಿಗೆ ಆಮೇಲೆ ಎಲ್ಲಾ ಅರ್ಥವಾಗುತ್ತಾ ಬಂತು. ಅಪ್ಪನ ಮನೆಗೆ ಬಂದು ಭೋರಾಡಿ ಅತ್ತಳು. ‘ಕುತ್ತಿಗೆ ಕುಯ್ದಿಟ್ರಿ’ ಎಂದು ಅಪ್ಪನಿಗೆ ಬಾಯಿಗೆ ಬಂದಂತೆ ಬೈದಳು. ‘ನಿನ್ನ ಹಣೇಬರದಲ್ಲಿ ಬ್ರಹ್ಮ ಅವನನ್ನೇ ಬರೆದು ಕಳಿಸಿದ್ರೆ ನಾವೆಂತ ಮಾಡೋಕಾಗುತ್ತೆ? ಜಾತಕ ಚೆನ್ನಾಗಿ ಆಗುತ್ತೆ ಅಂತ...’ ಕುಂಯ್ಗುಟ್ಟಿದ್ದನಂತೆ ಅಪ್ಪ.

‘ಒಲೆಗೆ ಹಾಕಿ ಸುಡು ನಿನ್ನ ಜಾತಕಾನ. ಬೂದೀನ ಜೇನುತುಪ್ಪ ಹಾಕಿ ನೆಕ್ಕು...’ ತಾನು ಒಂದು ಹೇಳಿ ಒಂದು ಬಿಡಲಿಲ್ಲ ಎಂದು ಸ್ವತಃ ದೇವಕಿಯೇ ಹೇಳಿದ್ದಳು. ಇದರಲ್ಲಿ ಏನಿದ್ದರೂ ಅಪ್ಪನ ಕೈವಾಡ. ಅಮ್ಮನಿಗೆ ಏನೆಂದರೆ ಏನೂ ಗೊತ್ತಿರಲು ಸಾಧ್ಯವಿಲ್ಲ ಎಂದು ಅವಳ ನಂಬಿಕೆ. ‘ಹೆಣ್ಣುಮಕ್ಕಳ ಹಣೇಬರಾನೇ ಇಷ್ಟು ಕಣೇ. ನಾವೇನೋ ಒಳ್ಳೇದಾಗ್ಲಿ ಅಂತಾನೇ ಮದುವೆ ಮಾಡಿ ಕಳಿಸ್ತೀವಿ. ಮುಂದಿಂದು ಅವ್ರವ್ರ ಹಣೇಬರ. ಹುಲ್ಲು, ನೀರು ಇರೋ ಕಡೆ ಕಟ್ಟಿದಾರಲ್ಲ, ಅಷ್ಟಕ್ಕೆ ಸಮಾಧಾನ ಪಟ್ಗಂಬೇಕು’ ಮಗಳ ಜೊತೆ ಸೇರಿ ತಾನೂ ಒಂದು ಒಬ್ಬೆ ಅತ್ತಿದ್ದಳಂತೆ ದೇವಕಿಯ ಅಮ್ಮ.

‘ಒಡಹುಟ್ಟಿದೋರ ಭವಿಷ್ಯ ನೋಡು, ಒಡಹುಟ್ಟಿದೋರ ಭವಿಷ್ಯ ನೋಡು’ ಎಂದು ಅವಳ ಅಮ್ಮ ಗೋಗರೆಯುತ್ತಿದ್ದಳು. ಕಲ್ಲು ಕರಗುವಂತೆ ಅಳುತ್ತಿದ್ದಳು. ಅತ್ತ ಗಂಡನ ಮನೆಯಿಂದ ಕರೆಯಲು ಜನ ಬಂದು ಬಂದು ಹೋಗುತ್ತಿತ್ತು.

‘ಒಳ್ಳೇ ಮಾತಲ್ಲಿ ನೀನು ಬರ್ಲಿಲ್ಲ ಅಂದ್ರೆ ನಿನ್ನ ಕಣ್ಣೆದುರೇ ಅವನಿಗೆ ಇನ್ನೊಂದು ಮದುವೆ ಮಾಡ್ತೀವಿ. ಆಮೇಲೆ ಮನೆಬಾಗ್ಲಿಗೆ ಬಂದು ಅತ್ರೂ ಇಲ್ಲ, ಕರೆದ್ರೂ ಇಲ್ಲ. ನಾಯೀನ ಥೂ ಬಿಟ್ಟು ಚಮಡ ಹರಿಸ್ತೀವಿ...’ ಎಂದು ಕೊನೆಯ ಬಾರಿ ಎಚ್ಚರಿಕೆಯ ಗಂಟೆ ಹೊಡೆದುಕೊಂಡ ಮೇಲೆ ದೇವಕಿ ತೌರುಮನೆಯಿಂದ ಹೊರಟಿದ್ದಳು. ಬರೀ ಹೊರಟಿದ್ದಲ್ಲ, ‘ಇನ್ಯಾವತ್ತೂ ಈ ಮನೆಯ ಹೊಸಿಲು ದಾಟಿ ಒಳಗೆ ಕಾಲಿಡಲ್ಲ. ನೀವೂ ಅಲ್ಲಿಗೆ ಬರೋ ತಾಪತ್ರಯ ತಗಂಬೇಡಿ. ಹಂಗೇನಾದ್ರೂ ಬಂದು ಗಿಂದ್ರೆ ನನ್ನ ಕೊಂದು ತಿಂದ ಪಾಪ ನಿಮಗೆ...’ ಎಂದು ಎಚ್ಚರಿಕೆ ಹೇಳಿಯೇ ಹೊರಟಿದ್ದಳು. ತೌರುಮನೆಯವರ ಹೀನಾಯ ಸ್ಥಿತಿಯ ಬಗ್ಗೆ ಅವಳಿಗೆ ಗೊತ್ತಿಲ್ಲದೆ ಇಲ್ಲ. ಅವಳ ನಂತರ ಮತ್ತೆ ನಾಲ್ಕು ಜನ ಹೆಣ್ಣುಮಕ್ಕಳು. ವರ್ಷಕ್ಕೊಬ್ಬರಂತೆ ನೆರೆದು ನಿಂತವರು. ನಿಲ್ಲುವವರು. ಕೊನೆಗೂ ಸಾಯುವ ಕಾಲಕ್ಕೆ ಅಪ್ಪ, ಅಮ್ಮನ ಬಾಯಿಗೆ ನೀರು ಬಿಡುವ ಮಗ ಹುಟ್ಟಿರಲಿಲ್ಲ. ಅವರಿಗೆ ಅದೊಂದು ದೊಡ್ಡ ಕೊರಗು. ಆಮೇಲೆ ಗಂಡನ ಮನೆಯಲ್ಲಿ ವಾರಗಿತ್ತಿಯರ ಗುಸಪಿಸದಿಂದ ಅವಳಿಗೆ ಮತ್ತೊಂದು ಸಂಗತಿ ಗೊತ್ತಾಗಿ ತೌರುಮನೆಯವರ ಬಗ್ಗೆ ಮನಸ್ಸು ಸಂಪೂರ್ಣ ಮುರಿದು ಬಿದ್ದಿತ್ತು. ಈ ಮದುವೆ ಮಾಡಿಕೊಡಲು ಅಪ್ಪ ಆ ಮನೆಯವರಿಂದ ದುಡ್ಡು ತೆಗೆದುಕೊಂಡಿದ್ದನಂತೆ. ಅಷ್ಟು ತೂಕದ ನಗ ಹಾಕಬೇಕು, ಇಷ್ಟು ತೂಕದ ಮಧುಪರ್ಕದ ಬೆಳ್ಳಿ ಸಾಮಾನು ಕೊಡಬೇಕು, ಮದುವೆಗೆ ಇಂತಿಷ್ಟೇ ಸೀಂ ಮಾಡಿಸಬೇಕು’ ಎಂದು ತಲೆಪ್ರತಿಷ್ಠೆ ಮಾಡುತ್ತಿದ್ದ ಕಾಲದಲ್ಲಿ ದೊಡ್ಡ ಜನಗಳು ತನ್ನನ್ನು ಪುಗಸಟ್ಟೆ ಮನೆ ತುಂಬಿಸಿಕೊಂಡಾಗಲೇ ದೇವಕಿಗೆ ಅನುಮಾನ ಬರಬೇಕಿತ್ತು.

(ಸಶೇಷ)